ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ದಕ್ಷಿಣ ಕನ್ನಡ, ಮಂಗಳೂರು.

**ಸೆಷನ್ಸ್ ಕೇಸ್ ನಂಬ್ರ 76/2023**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಪ್ರೇಮ್ ಕುಮಾರ್ | ಪ್ರಾಸಾಃ 15 |
| ತಂದೆಯ ಹೆಸರು | : | ಥಾವರೆ ಸಿಂಗ್ ನಾಯ್ಕ | ಚಾಸಾಃ 27 |
| ಪ್ರಾಯ | : | 32 ವರ್ಷ | **ದಿನಾಂಕಃ 03.02.2026** ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ಪಿಸಿ850, ಬಜ್ಪೆ ಪೊಲೀಸ್ ಠಾಣೆ | |
| ವಾಸಸ್ಥಳ | : | ಬಜ್ಪೆ, ಮಂಗಳೂರು | |

**ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ**

ನಾನು ಮೇ 2022 ರಿಂದ ಇಲ್ಲಿಯವರೆಗೆ ಮಂಗಳೂರಿನ ಬಜ್ಪೆ ಪೊಲೀಸ್ ಠಾಣೆ ಯಲ್ಲಿ ಪಿ ಸಿ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿನಾಂಕ 28.11.2022 ರಂದು ಬೆಳಗ್ಗೆ ನಾನು ನ್ಯಾಯಾಲಯದ ಕರ್ತವ್ಯದಲ್ಲಿರುವಾಗ, ಸುಮಾರು 10.00 ಗಂಟೆ ಸಮಯಕ್ಕೆ ಬಜ್ಪೆ ಪೋಲಿಸ್ ಠಾಣೆಯ ಚಾಸಾ-28 ರವರು, ಚಾಸಾ-1 ರವರ ದೂರಿನಂತೆ ಠಾಣಾ ಅಪರಾಧ ಸಂಖ್ಯೆ 143/2022 ರಲ್ಲಿ ಪ್ರಕರಣ ದಾಖಲಾಗಿರುತ್ತದೆ. ಸದರಿ ಪ್ರಕರಣದ ಪ್ರ.ವ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ನೀಡುವಂತೆ ಫೋನ್ ಮೂಲಕ ತಿಳಿಸಿರುತ್ತಾರೆ. ಅದರಂತೆ ನಾನು ಠಾಣೆಯ ಸಂಬಂಧಪಟ್ಟ ಪ್ರಕರಣಗಳು ಜಿಲ್ಲಾ ಹಾಗೂ ಸತ್ರ ನ್ಯಾಯಾಲಯಗಳಲ್ಲಿ ಆ ದಿನ ವಿಚಾರಣೆಗೆ ಇದ್ದುದ್ದರಿಂದ ಮದ್ಯಾಹ್ನ ಸುಮಾರು 1.30 ಗಂಟೆಗೆ ನ್ಯಾಯಾಲಯದಿಂದ ಹೊರಟು ಠಾಣೆಗೆ ತಲುಪಿ ಸದರಿ ಪ್ರ.ವ.ವರದಿಯನ್ನು ಮಾನ್ಯ 6ನೇ ಜೆ.ಎಂ.ಎಫ್. ಸಿ ಮಂಗಳೂರು ನ್ಯಾಯಾಲಯಕ್ಕೆ ಸಂಜೆ 4.10 ಗಂಟೆಗೆ ನೀಡಿರುತ್ತೇನೆ. ಸಾಕ್ಷಿ ಗುರುತಿಸಿದ ಸದರಿ ಪ್ರ.ವ.ವರದಿಯನ್ನು

ಈಗಾಗಲೇ **ನಿಪಿ-13** ಎಂದು ಗುರುತಿಸಲಾಗಿರುತ್ತದೆ. ನಾನು ಈ ಬಗ್ಗೆ ದಿನಾಂಕ 05.02.2023 ರಂದು ತನಿಖಾಧಿಕಾರಿಯವರ ಮುಂದೆ ಹೇಳಿಕೆ ನೀಡಿರುತ್ತೇನೆ.

**<u>ಪಾಟೀ ಸವಾಲುಃ ಆರೋಪಿ ಪರ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ವಕೀಲರಾದ ಶ್ರೀ ಕೆ.ಡಿ.ಎಸ್. ವಕೀಲರಿಂದಃ</u>**-

2. ನಾನು ಈ ಪ್ರಕರಣದ ತನಿಖೆಯಲ್ಲಿ ಭಾಗವಹಿಸಿರುವುದಿಲ್ಲ. ನಾನು ಹೇಳಿಕೆ ನೀಡುವ ಸಮಯದಲ್ಲಿ, ಪ್ರಕರಣದ ಆರೋಪಿ ಕೊಲೆ ಮಾಡಿರುವುದು ಕಂಡು ಬರುತ್ತದೆ ಎಂದು ಹೇಳಿದ್ದೀರಾ ಎಂದರೆ ಹೇಳಿರುತ್ತೇನೆ. ಆ ಬಗ್ಗೆ ನಿಮಗೆ ಹೇಗೆ ಗೊತ್ತಾಯಿತು ಎಂದರೆ ನಾನು ನಿಪಿ-13 ನ್ನು ನೋಡಿ ತಿಳಿದುಕೊಂಡಿರುತ್ತೇನೆ.

**<u>ಮರು ವಿಚಾರಣೆಃ</u>** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ., ಮಂಗಳೂರು.